ಓ.ಎಸ್. ನಂ. 37/2016 ಪಿ.ಡಬ್ಲೂಃ 1

ದಿನಾಂಕಃ 09.01.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಪಾಟೀಸವಾಲು ಶ್ರೀ. ಕೆ.ಕೆ.ಆರ್. ವಕೀಲರಿಂದ :-

ನಿಪಿ 10 ರಲ್ಲಿನ ಸ್ವತ್ತು ಕೆ.ಬಿ. ಶಿವಕುಮಾರ್ ಬಿನ್ ಭುಜಂಗಸ್ವಾಮಿ ರವರಿಗೆ ಒಂದು ಎಕರೆ 4 ಗುಂಟೆ ವಿಭಾಗದ ಮೂಲಕ ಹೋಗಿರುತ್ತದೆ ಎಂದರೆ ಹೌದು. ನಿಪಿ 10 ರ ಸ್ವತ್ತಿನ ಮೇಲೆ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ 11 ರಲ್ಲಿರುವ ಸ್ವತ್ತು ನಮ್ಮ ಪ್ರಿತ್ರಾರ್ಜಿತ ಆಸ್ತಿ ಎಂದರೆ ಹೌದು. ಸದರಿ ಆಸ್ತಿ ಭುಜಂಗಸ್ವಾಮಿ ಬಿನ್ ಚೆನ್ನಾಪಾಜಯ್ಯ ರವರ ಹೆಸರಿನಲ್ಲಿದೆ ಎಂದರೆ ಹೌದು. ನಿಪಿ 12 ರಲ್ಲಿನ ಸ್ವತ್ತು ನಮಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತು ಎಂದರೆ ಹೌದು. ಸದರಿ ಸ್ವತ್ತಿನಲ್ಲಿ 21 ಗುಂಟೆ ಸ್ವತ್ತು ಲತಾಮಣಿ ಬಿನ್ ಭುಜಂಗಸ್ವಾಮಿರವರಿಗೆ ವರ್ಗಾವಣೆಯಾಗಿದೆ ಎಂದರೆ ಹೌದು. ನಿಪಿ 13 ರಲ್ಲಿ ಸರ್ವೆ ನಂಬರ್ 105/1 ಬಿ ಒಂದು ಎಕರೆ ಆಸ್ತಿ ಕೆ.ಬಿ. ಶಿವಕುಮಾರ ಬಿನ್ ಲೇಟ್. ಭುಜಂಗಸ್ವಾಮಿ ಹಾಗೂ ಕೆ.ಬಿ. ಹರೀಶ ಬಿನ್ ಕೆ.ಸಿ. ಭುಜಂಗಸ್ವಾಮಿ ರವರ ಹೆಸರಿನಲ್ಲಿ ಜಂಟಿಖಾತೆಯಾಗಿದೆ ಎಂದರೆ ಹೌದು. ನಿಪಿ 13 ರಲ್ಲಿನ ಸ್ವತ್ತು ಈರಮ್ಮನವರ ಹೆಸರಿನಿಂದ ಎ.ಸಿ. ನ್ಯಾಯಾಲಯದ ಆದೇಶದಂತೆ ಶಿವಕುಮಾರ ಹಾಗೂ ಹರೀಶ್ ರವರ ಹೆಸರಿಗೆ ಖಾತೆ ಬಂದಿರುತ್ತದೆ ಎಂದರೆ ಸರಿಯಲ್ಲ. ಎಂ.ಆರ್.ನಲ್ಲಿ ಸ್ಪಷ್ಟವಾದಂತಹ ಆದೇಶ ಇದ್ದರೂ ಸಹಾ ದುರುದ್ದೇಶದಿಂದ ನಿಪಿ 13 ರ ಸ್ವತ್ತನ್ನು ಈ ಪ್ರಕರಣದಲ್ಲಿ ಸೇರಿಸಲಾಗಿರುತತದೆ ಎಂದರೆ ಸರಿಯಲ್ಲ.

ನಿಪಿ 16 ರಲ್ಲಿನ 10 ಗುಂಟೆ ಸ್ವತ್ತು ಭುಜಂಗಸ್ವಾಮಿರವರ ಸ್ವಯಾರ್ಜಿತ ಆಸ್ತಿ ಎಂದರೆ ಹೌದು. ಸದರಿ ಆಸ್ತಿಯನ್ನು ಭುಜಂಗಸ್ವಾಮಿರವರು ಕಲ್ಲಹಳ್ಳಿ ಗ್ರಾಮದ ಶಿವನಂಜಪ್ಪ ರವರಿಂದ ಶುದ್ಧ ಕ್ರಯಕ್ಕೆ ಪಡೆದಂತಹ ಸ್ವತ್ತು ಎಂದರೆ ಹೌದು. ಸದರಿ ಸ್ವತ್ತಿನ ಕುರಿತು ಎ.ಸಿ. ನ್ಯಾಯಾಲಯದಲ್ಲಿ ವ್ಯಾಜ್ಯ ನಡೆದು ಖಾತೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ 18 ರ ದಾಖಲೆಯಂತೆ ಶಿವಕುಮಾರ್ ರವರಿಗೆ ಎಂಟೂವರೆ ಗುಂಟೆ ಹಾಗೂ ಹರೀಶ್ ರವರಿಗೆ ಆರೂವರೆ ಗುಂಟೆ ಖಾತೆ ಬಂದಿರುತ್ತದೆ ಎಂದರೆ ಹೌದು. ಸದರಿ ಸ್ವತ್ತು ಸಹಾ ಭುಜಂಗಸ್ವಾಮಿರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಆಸ್ತಿ ಎಂದು ಉತ್ತರಿಸುತ್ತಾರೆ. ಸದರಿ ಸ್ವತ್ತನ್ನು ಭುಜಂಗಸ್ವಾಮಿರವರು ಕಲ್ಲಹಳ್ಳಿ ಗ್ರಾಮದ ಸುಬ್ಬರಾಯ್ ರವರಿಂದ ಖರೀದಿ ಮಾಡಿರುವ ಸ್ವತ್ತು ಎಂದರೆ ನನಗೆ ನೆನಪಿರುವುದಿಲ್ಲ.

ನಿಪಿ 16 ರ ಸ್ವತ್ತನ್ನು ಭುಜಂಗಸ್ವಾಮಿರವರು ಸುಬ್ಬರಾಯಿ ರವರಿಂದ ಖರೀದಿ ಮಾಡಿರುವ ಸ್ವತ್ತು ಎಂದರೆ ನಗನೆ ಈಗ ನೆನಪಿರುವುದಿಲ್ಲ. ಸದರಿ ಸ್ವತ್ತು ಭುಜಂಗಸ್ವಾಮಿರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ. ಭುಜಂಗಸ್ವಾಮಿ ಮೃತಪಟ್ಟ ನಂತರ ಅವರ ಹಿರಿಯ ಮಗ ಶಿವಕುಮಾರ್ ರವರಿಂದ ಕಿರಿಯ ಮಗನಾದ ಹರೀಶ್ ರವರಿಗೆ ಖಾತೆ ಬಂದಿರುತ್ತದೆ ಎಂದರೆ ಹೌದು. ನಿಪಿ 17 ರಲ್ಲಿನ ಸ್ವತ್ತು ಭುಜಂಗಸ್ವಾಮಿರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ. ಸದರಿ ಸ್ವತ್ತನ್ನು ಭುಜಂಗಸ್ವಾಮಿರವರು ಕಲ್ಲಹಳ್ಳಿ ಗ್ರಾಮದ ಅಂಗಡಿ ಈರಮ್ಮನವರಿಂದ ಖರೀದಿ ಮಾಡಿರುವ ಸ್ವತ್ತು ಎಂದರೆ ಹೌದು. ಸದರಿ ಸ್ವತ್ತು ಹರೀಶ ಬಿನ್ ಭುಜಂಗಸ್ವಾಮಿ ಹೆಸರಿನಲ್ಲಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನಿಪಿ 18 ರಲ್ಲಿನ ಆಸ್ತಿ ಭುಜಂಗಸ್ವಾಮಿರವರು ಖರೀದಿ ಮಾಡಿರುವ ಸ್ವತ್ತು ಎಂದರೆ ಹೌದು. ಸದರಿ ಸ್ವತ್ತನ್ನು ಕಲ್ಲಹಳ್ಳಿ ಗ್ರಾಮದ ಚಂದ್ರಪ್ಪನವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಹೌದು. ಭುಜಂಗಸ್ವಾಮಿ ಮೃತಪಟ್ಟನಂತರ ಅವರ ಮಗ ಹರೀಶ್ ರವರ ಹೆಸರಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಮಗೆ ಖಾತೆಯಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ಸ್ವತ್ತನ್ನು ಶಿವಕುಮಾರ್, ಹರೀಶ್ ವಿಭಾಗ ಮಾಡಿಕೊಂಡು ಉಳುಮೆ ಮಾಡುತ್ತಿದ್ದಾರೆ ಎಂದರೆ ಹೌದು. ನಿಪಿ 19 ರ ಸ್ವತ್ತನ್ನು ನಮ್ಮ ಭಾವ ಭುಜಂಗಸ್ವಾಮಿ ಕಲ್ಲಹಳ್ಳಿ ಗ್ರಾಮದ ಚಂದ್ರಪ್ಪನವರಿಂದ ಖರೀದಿ ಮಾಡಿರುವ ಸ್ವತ್ತು ಎಂದರೆ ನನಗೆ ನೆನಪಿರುವುದಿಲ್ಲ. ಸದರಿ ಸ್ವತ್ತಿನ ಖಾತೆ ಕೆ.ಬಿ. ಶಿವಕುಮಾರ್ ರವರ ಹೆಸರಿನಲ್ಲಿ ಎಂ.ಆರ್.ಹೆಚ್. 10/12-13 ರಂತೆ ಖಾತೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನಿ.ಪಿ. 20 ರಲ್ಲಿನ ಸ್ವತ್ತು ಚಂದ್ರಪ್ಪನವರಿಂದ ವರ್ಗಾ ವರ್ಗಿ ಮಾಡಿಕೊಂಡು ಹರೀಶ್ ರವರ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಸ್ವತ್ತು ಹರೀಶ್ ರವರ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಸ್ವತ್ತನ್ನು ಹರೀಶ ಹಾಗೂ ಶಿವಕುಮಾರ ಜಂಟಿಯಾಗಿ ಅನುಭೋಗ ಮಾಡುತ್ತಿದ್ದಾರೆ ಎಂದರೆ ಹೌದು. ನಿ,ಪಿ. 21 ರಲ್ಲಿನ ಸ್ವತ್ತು ಭುಜಂಗಸ್ವಾಮಿರವರು ಖರೀದಿ ಮಾಡಿರುವ ಸ್ವತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಸ್ವತ್ತನ್ನು ಕಲ್ಲಹಳ್ಳಿ ಗ್ರಾಮದ ಸುಬ್ಬಪ್ಪರವರಿಂದ ಖರೀದಿ ಮಾಡಿರುವ ಸ್ವತ್ತು ಎಂದರೆ ಹೌದು. ಸದರಿ ಸ್ವತ್ತನ್ನು ಹರೀಶ ಹಾಗೂ ಶಿವಕುಮಾರ್ ರವರು ಅನುಭವ ಮಾಡಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಹೌದು. ನಿಪಿ 22 ರಲ್ಲಿನ 20 ಗುಂಟೆ ಆಸ್ತಿಯನ್ನು

ಸುಂದ್ರಮ್ಮ ಕೋಂ. ಲೇಟ್. ಭುಜಂಗಸ್ವಾಮಿರವರ ಹೆಸರಿನಲ್ಲಿದ್ದು ಸದರಿ ಸ್ವತ್ತನ್ನು ಭುಜಂಗಸ್ವಾಮಿರವರು ಖರೀದಿ ಮಾಡಿರುವ ಆಸ್ತಿ ಎಂದರೆ ನನಗೆ ಗೊತ್ತಿರುವುದಿಲ್ಲ.

ಸದರಿ ಸ್ವತ್ತನ್ನು ಸುಬ್ಬಯ್ಯ ಹಾಗೂ ಅವರ ಮಕ್ಕಳಿಂದ ಖರೀದಿ ಮಾಡಿರುತ್ತಾರೆ ಎಂದರೆ ಹೌದು. ಭುಜಂಗಸ್ವಾಮಿ ಮೃತಪಟ್ಟ ನಂತರ ಸದರಿ ಸ್ವತ್ತು ಸುಂದ್ರಮ್ಮನವರ ಹೆಸರಿನಲ್ಲಿ ಖಾತೆ ಬಂದಿರುತ್ತದೆ ಎಂದರೆ ಹೌದು. ನಿಪಿ 23 ರಲ್ಲಿನ ಸ್ವತ್ತನ್ನು ಭುಜಂಗಸ್ವಾಮಿ ರವರು ಸ್ವಯಾರ್ಜಿತವಾಗಿ ಖರೀದಿ ಮಾಡಿರುವಂತಹ ಆಸ್ತಿ ಎಂದರೆ ಹೌದು. ಸದರಿ ಸ್ವತ್ತು ಭುಜಂಗಸ್ವಾಮಿ ಮೃತಪಟ್ಟನಂತರ ಸುಂದ್ರಮ್ಮನ ಹೆಸರಿಗೆ ಖಾತೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 106/12 ಬಿ ರಲ್ಲಿ ನನ್ನ ಗಂಡ ಕೆ.ಸಿ. ಮೋಹನ ಬಿನ್ ಚೆನ್ನಾಪಜಯ್ಯನಿಗೆ ಎಷ್ಟು ಆಸ್ತಿ ಇದೆ ಎಂದು ನನಗೆ ಮರೆತುಹೋಗಿರುತ್ತದೆ. ನಿಪಿ 24 ರಲ್ಲಿ ಇರುವಂತಹ 6 ಗುಂಟೆ ಆಸ್ತಿ ಭುಜಂಗಸ್ವಾಮಿ ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಎಂ.ಆರ್. 3/1998-99 ನ್ನು ಯಾವುದೇ ದಾಖಲೆ ಇಲ್ಲದೇ ಇದ್ದರು ಸಹಾ ರೆವಿನ್ಯೂ ಇಲಾಖೆಯಲ್ಲಿ ಸೃಷ್ಠಿ ಮಾಡಿರುವ ದಾಖಲೆ ಎಂದರೆ ಸರಿಯಲ್ಲ. ನಿಪಿ 25 ರಲ್ಲಿನ 106/15 ರ ಸ್ವತ್ತು ಸುಂದ್ರಮ್ಮ ಕೋಂ. ಭುಜಂಗಸ್ವಾಮಿರವರ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ಸರಿಯಲ್ಲ.

ಸಾಕ್ಷಿ ಮುಂದುವರೆದು ನಾವು ಸ್ವಾಧೀನದಲ್ಲಿದ್ದು, ಲೋನ್ ತೆಗೆದಿರುವುದಾಗಿ ಉತ್ತರಿಸುತ್ತಾರೆ. ಸರ್ವೆ ನಂಬರ್ 106/15 ರ 17 ಗುಂಟೆ ಸ್ವತ್ತನ್ನು ಸುಂದ್ರಮ್ಮ ಕೋಂ. ಲೇಟ್. ಭುಜಂಗಸ್ವಾಮಿ ರವರು ಖರೀದಿ ಮಾಡಿರುವ ಸ್ವತ್ತು ಎಂದರೆ ಹೌದು. ಸರ್ವೆ ನಂಬರ್ 106/16 ರಲ್ಲಿನ ಒಂದು ಎಕರೆ ಆಸ್ತಿಯನ್ನು ಭುಜಂಗಸ್ವಾಮಿರವರು ಕಲ್ಲಹಳ್ಳಿ ಗ್ರಾಮದ ಕೆಂಚೇಗೌಡರವರಿಂದ ಖರೀದಿ ಮಾಡಿರುವ ಸ್ವತ್ತು ಎಂದರೆ ಹೌದು. ನಿಪಿ 26 ರಲ್ಲಿನ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಗಂಡ ಕೆ.ಸಿ. ಮೋಹನ ಹಾಗೂ ಭುಜಂಗಸ್ವಾಮಿ ರವರ ನಡುವೆ

ಯಾವುದೇ ವಿಭಾಗ ಪತ್ರವಾಗಿರುವುದಿಲ್ಲ ಎಂದರೆ ಸರಿಯಲ್ಲ. ವಿಭಾಗಪತ್ರವಾಗಿರುತ್ತದೆ. ವಿಭಾಗಪತ್ರದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ . ಸದರಿ ವಿಭಾಗ ಪತ್ರ ನೋಂದಣಿಯಾಗಿರುತ್ತದೆ . ಭುಜಂಗಸ್ವಾಮಿರವರ ಮಕ್ಕಳು ಆ ಸಂಧರ್ಭದಲ್ಲಿ ಚಿಕ್ಕವರಾಗಿದ್ದರು, ಅವರು ಪ್ರಾಪ್ತ ವಯಸ್ಕರಾಗಿರಲಿಲ್ಲ. ನಾವು ಮುಟೇಷನ್ ಮಾಡಿಸಿಕೊಳ್ಳುವ ವೇಳೆಗೆ ಭುಜಂಗಸ್ವಾಮಿರವರ ಮಕ್ಕಳು ಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿಯಲ್ಲ. ಭುಜಂಗಸ್ವಾಮಿರವರ ಮಕ್ಕಳು ಸುಳ್ಳು ಹೇಳಿಕೆ ಕೊಟ್ಟಿರುವುದಾಗಿ ಉತ್ತರಿಸುತ್ತಾರೆ. ಎಂ.ಆರ್. 3/98-99 ರ ದಾಖಲೆಯನ್ನು ನನ್ನ ಗಂಡ ಕಂದಾಯ ಇಲಾಖೆಯಲ್ಲಿ ಸೃಷ್ಠಿ ಮಾಡಿರುವಂತಹ ದಾಖಲೆ ಎಂದರೆ ಸರಿಯಲ್ಲ. ನಿಪಿ 26 ರ ಸ್ವತ್ತನ್ನು ನಮಗೆ ಯಾವುದೇ ಹಕ್ಕು ಪ್ರಾಪ್ತವಾಗದೇ ಇದ್ದರು ಸಹಾ ಕಾನೂನು ಬಾಹಿರವಾಗಿ ನನ್ನ ತಮ್ಮ ಸತೀಶ ರವರ ಹೆಸರಿಗೆ ದಾಖಲೆಯನ್ನು ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಯಾವುದೇ ದರ್ದು ಇಲ್ಲದೇ ಇದ್ದರು ಸಹಾ ಕ್ರಯಪತ್ರವನ್ನುಸೃಷ್ಠಿ ಮಾಡುಬೇಕೆಂಬ ಉದ್ದೇಶದಿಂದ ದಾಖಲೆಯನ್ನು ಸೃಷ್ಠಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದೇವಿರಮ್ಮನವರು ಬಾಯಿಮಾತಿನ ಮೂಲಕ ನಮಗೆ ಹಂಚಿಕೆ ಮಾಡಿಕೊಟ್ಟಿದ್ದರೆಂದು ಉತ್ತರಿಸುತ್ತಾರೆ. ದೇವಿರಮ್ಮ ನನ್ನ ಅತ್ತಿಗೆ. ದೇವಿರಮ್ಮ ಈಗ ಮೃತಪಟ್ಟಿರುತ್ತಾರೆ. ಬಾಯಿಮಾತಿನಂತೆ ಹಂಚಿಕೆ ಮಾಡಿದ ನಂತರ ಖಾತೆ ನಮಗೆ ಆಗಿರುತ್ತದೆ ಎಂದು ಉತ್ತರಿಸುತ್ತಾರೆ.

ನಿಪಿ 27 ರಲ್ಲಿನ ಸರ್ವೆ ನಂಬರ್ 106/17 ರ 17 ಗುಂಟೆ ಸ್ವತ್ತು ಭುಜಂಗಸ್ವಾಮಿರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತನ್ನು ಹರೀಶ ಬಿನ್ ಭುಜಂಗಸ್ವಾಮಿರವರು ಸ್ವಾಧೀನ ಅನುಭವ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ 28 ರಲ್ಲಿನ ಸರ್ವೆ ನಂಬರ್ 106/19 ರ 10 ಗುಂಟೆ ಸ್ವತ್ತನ್ನು ನನ್ನ ಭಾವ ಭುಜಂಗಸ್ವಾಮಿ ರವರು ಕಲ್ಲಹಳ್ಳಿ ಗ್ರಾಮದ ಕೆಂಚೇಗೌಡ ರವರಿಂದ ಖರೀದಿ ಮಾಡಿರುವ ಸ್ವತ್ತು ಎಂದರೆ ಹೌದು. ಸದರಿ ಸ್ವತ್ತಿನ ಖಾತೆ ಶಿವಕುಮಾರ್ ರವರ ಹೆಸರಿನಲ್ಲಿರುತ್ತದೆ ಎಂದರೆ ನನಗೆ ಈಗ ನೆನಪಿರುವುದಿಲ್ಲ. ಹಾಲಿ ಹರೀಶ ಹಾಗೂ ಶಿವಕುಮಾರ ಸ್ವಾಧೀನದಲ್ಲಿರುತ್ತಾರೆ ಎಂದರೆ

ನನಗೆ ನೆನಪಿರುವುದಿಲ್ಲ. ನಿಪಿ 29 ರಲ್ಲಿನ 112/3, ಒಂದು ಎಕರೆ ಆರು ಗುಂಟೆ ಸ್ವತ್ತನ್ನು ಭುಜಂಗಸ್ವಾಮಿರವರು ಕಲ್ಲಹಳ್ಳಿ ಗ್ರಾಮದ ರಾಮೇಗೌಡರವರಿಂದ ಖರೀದಿ ಮಾಡಿರುವ ಸ್ವತ್ತು ಎಂದರೆ ನನಗೆ ಈಗ ನೆನಪಿರುವುದಿಲ್ಲ. ಸದರಿ ಸ್ವತ್ತು ವಿಭಜನೆ ಮೂಲಕ ಲತಾಮಣಿ ರವರ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಆಗಿರಬಹುದು. ನಿಪಿ 30 ರಲ್ಲಿನ ಸರ್ವೆ ನಂಬರ್ 112/7 ಮೂರು ಎಕರೆ ಸ್ವತ್ತನ್ನು ಭುಜಂಗಸ್ವಾಮಿ ರವರು ಕಲ್ಲಹಳ್ಳಿ ಗ್ರಾಮದ ರಾಮೇಗೌಡ ರವರಿಂದ ಖರೀದಿ ಮಾಡಿರುವಂತಹ ಸ್ವತ್ತು ಎಂದರೆ ಹೌದು.

ಭುಜಂಗಸ್ವಾಮಿರವರು ಖರೀದಿಸಿದಂತಹ ಸ್ವತ್ತನ್ನು ನನ್ನ ಗಂಡ ಕೆ.ಸಿ. ಮೋಹನ್ ಅಕ್ರಮವಾಗಿ ಖಾತೆ ಮಾಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಿಸ್ಸೆಯಾದ ನಂತರ ಖಾತೆಯಾಗಿರುವುದಾಗಿ ಉತ್ತರಿಸುತ್ತಾರೆ. ನಾನು ಹಾಗೂ ನನ್ನ ಗಂಡ ಕೂಡಿಕೊಂಡು ಈ ಪ್ರಕರಣದ 9 ನೇ ಪ್ರತಿವಾದಿ ಮಾರಾಟ ಮಾಡಿರುತ್ತೇವೆ ಎಂದರೆ ಹೌದು. ನನ್ನ ಗಂಡನಿಗೆ ಒತ್ತಡವನ್ನು ಹೇರಿ ಯಾವುದೇ ಹಕ್ಕು ಪ್ರಾಪ್ತವಾಗದೇ ಇದ್ದರು ಸಹಾ ನನ್ನ ತಮ್ಮ ಒಂಬತ್ತನೇ ಪ್ರತಿವಾದಿಗೆ ಸ್ವತ್ತನ್ನು ವರ್ಗಾವಣೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 114 ರಲ್ಲಿ ಮೂರು ಎಕರೆ ಆರು ಗುಂಟೆ ನಮ್ಮ ಪಿತ್ರಾರ್ಜಿತ ಸ್ವತ್ತು ಎಂದರೆ ಹೌದು. ಸರ್ವೆ ನಂಬರ್ 126/1 ಎ ಒಂದು ಎಕರೆ ಸ್ವತ್ತನ್ನು ಭುಜಂಗಸ್ವಾಮಿ ರವರು ಪುಟ್ಟಮ್ಮರವರಿಂದ ಖರೀದಿ ಮಾಡಿರುವ ಆಸ್ತಿ ಎಂದರೆ ಹೌದು. ಭುಜಂಗಸ್ವಾಮಿ ಮೃತಪಟ್ಟ ನಂತರ ಸುಂದ್ರಮ್ಮನವರ ಹೆಸರಿಗೆ ಪೌತಿ ಖಾತೆ ಬಂದಿರುತ್ತದೆ ಎಂದರೆ ಹೌದು. ಸರ್ವೆ ನಂಬರ್ 126/1 ಬಿ ಒಂದು ಎಕರೆ 4 ಗುಂಟೆ ನಮ್ಮ ಕುಟುಂಬದ ಪಿತ್ರಾರ್ಜಿತ ಸ್ವತ್ತು ಎಂದರೆ ಹೌದು.

ಸರ್ವೆ ನಂಬರ್ 158/3 ರಲ್ಲಿನ 29 ಗುಂಟೆ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತು ಎಂದರೆ ಹೌದು. ನಿಪಿ 36 ಎಂ.ಆರ್. 3/98-99 ರ ದಾಖಲೆ ಯಾವುದೇ ವಿಭಾಗವಾಗದೇ ಬಂದಿರುವಂತಹ ದಾಖಲೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ವಿಭಾಗವಾದ ನಂತರ ಬಂದಿರುವಂತಹ ದಾಖಲೆ ಎಂದು ಉತ್ತರಿಸುತ್ತಾರೆ. ನಿಪಿ 36 ರ ದಾಖಲೆಯನ್ನು ನಾವು ಸೃಷ್ಠಿಸಿರುವ ದಾಖಲೆ ಎಂದರೆ ಸರಿಯಲ್ಲ. ಸದರಿ ದಾಖಲೆ ಆಗುವ ವೇಳೆಗೆ ಭುಜಂಗಸ್ವಾಮಿ ಮಕ್ಕಳು ಪ್ರಾಪ್ತ ವಯಸ್ಕರು ಎಂದರೆ ಸರಿಯಲ್ಲ. ನಿಪಿ 43 ರ ದಾಖಲೆ ವಿಭಾಗ ಪತ್ರದ ಮೂಲಕ ಆದಂತಹ ದಾಖಲೆ ಎಂದರೆ ಸರಿಯಲ್ಲ. ನಿಪಿ 44 ರಲ್ಲಿ ಉಲ್ಲೇಖಿಸಿರುವ ಸರ್ವೆ ನಂಬರ್ 106/16 ವಿಭಾಗದ ರೀತ್ಯಾ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಕಾನೂನು ಬಾಹಿರವಾಗಿ 9 ನೇ ಪ್ರತಿವಾದಿ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ 37 ರ ಸ್ವತ್ತಿನ ಮನೆಯನ್ನು ಅಕ್ರಮವಾಗಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ .

ದಾವಾ ಅನುಸೂಚಿ 37 ನೇ ಸ್ವತ್ತನ್ನು ಭುಜಂಗಸ್ವಾಮಿ ರವರು ಕೇಶವ ಅವದಾನಿ ರವರ ಮಗ ಹೆಚ್.ಕೆ. ವೆಂಕಟೇಶ ಅವದಾನಿ ರವರಿಂದ ಖರೀದಿ ಮಾಡಿರುವಂತಹ ಸ್ವತ್ತು ಎಂದರೆ ಹೌದು. ದಾವಾ ಅನುಸೂಚಿ 37 ನೇ ಸ್ವತ್ತನ್ನು ಖರೀದಿಸುವ ಕಾಲಕ್ಕೆ ನನ್ನ ಗಂಡ ಶಿಕ್ಷಕನಾಗಿ ಬೇರೆ ಊರಿನಲ್ಲಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದಲ್ಲಿ ಇದ್ದರು ಎಂದು ಉತ್ತರಿಸುತ್ತಾರೆ. ದಾವಾ ಅನುಸೂಚಿ 37 ನೇ ಸ್ವತ್ತನ್ನು ಭುಜಂಗಸ್ವಾಮಿರವರು ದಿನಾಂಕ : 21.09.1982 ರಂದು ಖರೀದಿಸಿದಂತಹ ಸಂಧರ್ಭದಲ್ಲಿ ನಾವು ಕಲ್ಲಹಳ್ಳಿ ಗ್ರಾಮದಲ್ಲಿ ವಾಸವಿದ್ದೆವು. ನಾವು ಕಲ್ಲಹಳ್ಳಿ ಗ್ರಾಮದಲ್ಲಿ ವಾಸವಿಲ್ಲದೇ ಇದ್ದರು ಸಹಾ ದಾವಾ ಅನುಸೂಚಿ 37 ನೇ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇದೇ ನ್ಯಾಯಾಲಯದಲ್ಲಿ ಭುಜಂಗಸ್ವಾಮಿರವರ ಹೆಂಡತಿ ಸುಂದ್ರಮ್ಮ, ಶಿವಕುಮಾರ ಹಾಗೂ ಹರೀಶ ರವರು ಅಸಲು ದಾವಾ ಸಂಖ್ಯೆ 23/2016 ರಂತೆ ಪ್ರಕರಣ ದಾಖಲು ಮಾಡಿರುವ ವಿಚಾರ ನನಗೆ ಗೊತ್ತಿರುತ್ತದೆ.

ದಾವಾ ಸಂಖ್ಯೆ: 23/2016 ರಲ್ಲಿ ಸುಂದ್ರಮ್ಮ ಹಾಗೂ ಇತರರು ಸರ್ವೆ ನಂಬರ್ 106/16 ರಲ್ಲಿ ಒಂದು ಎಕರೆ, 112/7 ರಲ್ಲಿ ಮೂರು ಎಕರೆ ಹಾಗೂ ಈ ಪ್ರಕರಣದ ದಾವಾ ಅನುಸೂಚಿ 37 ನೇ ಸ್ವತ್ತಿನ ಮನೆ ಕುರಿತು ನಾವು ಅಕ್ರಮವಾಗಿ ಈ ಪ್ರಕರಣದ 9 ನೇ ಪ್ರತಿವಾದಿಗೆ ಸದರಿ ಸ್ವತ್ತುಗಳನ್ನು ಮಾರಾಟ ಮಾಡಿರುವುದು ತಪ್ಪೆಂದು ಹಾಗೂ ಸದರಿ ಸ್ವತ್ತುಗಳು ಭುಜಂಗಸ್ವಾಮಿರವರ ಸ್ವಯಾರ್ಜಿತ ಆಸ್ತಿ ಎಂದು ಹಕ್ಕು ಘೋಷಣೆಗಾಗಿ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿ ಹೇಳಿಕೆ ನೀಡಿ ದಾವೆ ಹೂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನಿಪಿ 58 ರ ಕ್ರಯಪತ್ರವನ್ನು ಯಾವುದೇ ಪ್ರತಿಫಲವನ್ನು ಪಡೆಯದೇ ನನ್ನ ತಮ್ಮ 9 ನೇ ಪ್ರತಿವಾದಿ ಸತೀಶ್ ರವರಿಗೆ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 58 ರಲ್ಲಿ ಪ್ರತಿಫಲವನ್ನು ಯಾವ ರೀತಿ ಪಡೆಯಲಾಯಿತು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮೂದು ಮಾಡಿರುತ್ತೇವೆ. ನಿಪಿ 59 ರಲ್ಲಿ 4,98,000 ರೂ ಗಳನ್ನು ಚೆಕ್‌ನ ಮೂಲಕ ಪಡೆದಿರುವುದಾಗಿ ನಮೂದು ಮಾಡಲಾಗಿರುತ್ತದೆ ಎಂದು ಉತ್ತರಿಸುತ್ತಾರೆ.

ಚೆಕ್ ಅನ್ನು ಯಾರ ಹೆಸರಿಗೆ ಪಡೆಯಲಾಗಿರುತ್ತದೆ ಎಂದು ನನಗೆ ಈಗ ನೆನಪಿರುವುದಿಲ್ಲ. ಚೆಕ್‌ನ ಮೂಲಕ ಹಣವನ್ನು ಯಾರ ಖಾತೆಗೆ ಜಮೆ ಮಾಡಿಕೊಳ್ಳಲಾಯಿತು ನನಗೆ ಈಗ ನೆನಪಿರುವುದಿಲ್ಲ. ನಿಪಿ 60 ರಲ್ಲಿ ನಮೂದಿಸಿರುವಂತೆ 25,59,000/- ರೂಗಳನ್ನು ಚೆಕ್‌ನ ಮೂಲಕ 9 ನೇ ಪ್ರತಿವಾದಿ ಸತೀಶ್ ರವರಿಂದ ಪಡೆಯಲಾಗಿರುತ್ತದೆ. ಚೆಕ್‌ನ ಮೂಲಕ ಹಣವನ್ನು ಯಾರ ಖಾತೆಗೆ ಜಮೆ ಮಾಡಿಕೊಳ್ಳಲಾಯಿತು ನನಗೆ ಈಗ ನೆನಪಿರುವುದಿಲ್ಲ. ನಿಪಿ 58 ರಿಂದ 60 ರ ದಾಖಲಾತಿಗಳನ್ನು ಯಾವುದೇ ಪ್ರತಿಫಲವನ್ನು ಪಡೆಯದೇ ದುರುದ್ದೇಶದಿಂದ ದಾಖಲೆಯನ್ನು ಸೃಷ್ಠಿ ಮಾಡುವ ಉದ್ದೇಶದಿಂದ 9 ನೇ ಪ್ರತಿವಾದಿ ಸತೀಶ್ ರವರ ಹೆಸರಿಗೆ ದಾಖಲೆಯನ್ನು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಎ ಸ್ವತ್ತಿನಲ್ಲಿರುವ ಐಟಂ ಸಂಖ್ಯೆ 2,4,5,12,13,14,15,16

17,18,19,20,21,22,23,24,25,27,28,30,34,35,36 37, ನನ್ನ ಭಾವ ಭುಜಂಗಸ್ವಾಮಿರವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಸ್ವತ್ತು ಎಂದು ಉತ್ತರಿಸುತ್ತಾರೆ.

ಭುಜಂಗಸ್ವಾಮಿರವರ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಹಾಗೂ ನಾವು ಸ್ವತ್ತುಗಳನ್ನು ಖರೀದಿಸಿಲು ನಾವು ಯಾವುದೇ ಹಣವನ್ನು ನೀಡದೇ ಇದ್ದರು ಸಹಾ ದುರುದ್ದೇಶದಿಂದ ಈ ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಾವ ಚೆನ್ನಾಪ್ಪಾಜಯ್ಯುರವರು ಮೃತಪಟ್ಟು 60 ವರ್ಷಗಳಾಗಿರಬಹಹುದು. ನನ್ನ ಗಂಡ ಮೃತಪಟ್ಟಾಗ ವಯಸ್ಸು ಎಷ್ಟಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು 73 ವರ್ಷ ವಯಸ್ಸಾಗಿತ್ತು ಎಂದು ಉತ್ತರಿಸುತ್ತಾರೆ. ನನ್ನ ಗಂಡ ಪ್ರಾಪ್ತ ವಯಸ್ಕರಾದ ನಂತರ ಕುಟುಂಬದಲ್ಲಿ ಒಟ್ಟಾಗಿರಲಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಶ್ರೀ. ಕೆ.ಕೆ.ಆರ್. ವಕೀಲರು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು

ಜೆಎಂಎಫ್‌ಸಿ  ಹೊಳೆನರಸೀಪುರ